# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1074 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 21/08/2025 |
| 4) | ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ-ಯಾದಗಿರಿ ಜಿಲ್ಲೆಗಳಿಗೆ ಯುವನಿಧಿ ಯೋಜನೆಗಾಗಿ ಸರ್ಕಾರದಿಂದ ಬಿಡುಗಡೆಯಾದ, ಖರ್ಚಾದ ಹಾಗೂ ಬಾಕಿ ಉಳಿದ ಹಣವೆಷ್ಟು;</td><td>ಯುವನಿಧಿ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಜಿಲ್ಲಾವಾರು ಅನುದಾನ ಬಿಡುಗಡೆಯಾಗಿರುವುದಿಲ್ಲ. ಕೇಂದ್ರ ಕಚೇರಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಅರ್ಹ ಫಲಾನುಭವಿಗಳ ಡಿಬಿಟಿ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು, ಇಲ್ಲಿಯವರೆಗೆ ಕಲಬುರಗಿ ಜಿಲ್ಲೆಗೆ ರೂ.46,80,40,500/-ಹಾಗೂ ಯಾದಗಿರಿ ಜಿಲ್ಲೆಗೆ ರೂ.19,79,73,000/- ಗಳ ಅನುದಾನ ವೆಚ್ಚವಾಗಿರುತ್ತದೆ.</td></tr>
<tr><td>ಆ)</td><td>ಸದರಿ ಯೋಜನೆಯಡಿ ನೋಂದಾಯಿಸಲ್ಪಟ್ಟ ಯುವಕ ಹಾಗೂ ಯುವತಿಯರ ಸಂಖ್ಯೆ ಎಷ್ಟು; ಇವರಲ್ಲಿ ಎಷ್ಟು ಯುವಕ / ಯುವತಿಯರಿಗೆ ಯುವನಿಧಿ ಹಣ ಮಂಜೂರು ಮಾಡಲಾಗಿದೆ;</td><td>ಯುವನಿಧಿ ಯೋಜನೆಯಡಿ ರಾಜ್ಯದಾದ್ಯಂತ ದಿನಾಂಕ: 19-08-2025ರ ಅಂತ್ಯಕ್ಕೆ 1,56,030 ಯುವಕರು ಹಾಗೂ 1,48,936 ಯುವತಿಯರು ಸೇರಿದಂತೆ ಒಟ್ಟು 3,04,966 ಅಭ್ಯರ್ಥಿಗಳು ನೋಂದಾಯಿಸಿದ್ದು ಅವರುಗಳಲ್ಲಿ 1,31,333 ಯುವಕರು ಮತ್ತು 1,23,700 ಯುವತಿಯರು ಸೇರಿದಂತೆ ಒಟ್ಟು 2,55,033 ಫಲಾನುಭವಿಗಳಿಗೆ ನಿರುದ್ಯೋಗ ಭತ್ಯೆಯನ್ನು ಪಾವತಿಸಲಾಗಿದೆ.<br><br>ಕಲಬುರಗಿ-ಯಾದಗಿರಿ ಜಿಲ್ಲೆಗಳಲ್ಲಿ ನೋಂದಾಯಿಸಿರುವ / ನಿರುದ್ಯೋಗ ಭತ್ಯೆ ಪಡೆದಿರುವ ಯುವಕ ಹಾಗೂ ಯುವತಿಯರ ವಿವರ ಈ ಮುಂದಿನಂತಿದೆ.<br><br>
<table>
<tr><th rowspan="2">ಜಿಲ್ಲೆ</th><th colspan="3">ನೋಂದಣಿ</th></tr>
<tr><th>ಯುವಕ</th><th>ಯುವತಿ</th><th>ಒಟ್ಟು</th></tr>
<tr><td>ಕಲಬುರಗಿ</td><td>11202</td><td>9529</td><td>20731</td></tr>
<tr><td>ಯಾದಗಿರಿ</td><td>5944</td><td>2883</td><td>8827</td></tr>
</table>
<br>
<table>
<tr><th rowspan="2">ಜಿಲ್ಲೆ</th><th colspan="3">ನಿರುದ್ಯೋಗ ಭತ್ಯೆ ಪಡೆದ ಫಲಾನುಭವಿಗಳು</th></tr>
<tr><th>ಯುವಕ</th><th>ಯುವತಿ</th><th>ಒಟ್ಟು</th></tr>
<tr><td>ಕಲಬುರಗಿ</td><td>9691</td><td>7922</td><td>17613</td></tr>
<tr><td>ಯಾದಗಿರಿ</td><td>5392</td><td>2503</td><td>7895</td></tr>
</table>
</td></tr>
<tr><td>ಇ)</td><td>ಯುವನಿಧಿ ಯೋಜನೆಗೆ ಅರ್ಹ ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ನಿಗದಿ ಮಾಡಿರುವ ಮಾನದಂಡಗಳೇನು?</td><td>ಯುವನಿಧಿ ಯೋಜನೆಯನ್ನು 2023, 2024 ಹಾಗೂ 2025 ರಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ತೇರ್ಗಡೆ ಯಾಗಿರುವ ಅಭ್ಯರ್ಥಿಗಳಿಗೆ ಜಾರಿ ಮಾಡಲಾಗಿದೆ. ಸದರಿ ಯೋಜನೆಯ ಮಾನದಂಡಗಳು ಮುಂದಿನಂತಿವೆ:-<br>1. <u>ಅರ್ಹತೆ</u>:-<br>• 2023,2024 ಹಾಗೂ 2025 ರಲ್ಲಿ ತೇರ್ಗಡೆ ಹೊಂದಿ 180 ದಿನಗಳ ನಂತರವೂ ಉದ್ಯೋಗ ದೊರಕದೇ ಅಥವಾ ಉನ್ನತ ವ್ಯಾಸಂಗಕ್ಕೆ ದಾಖಲಾಗದಿರುವ ಅಭ್ಯರ್ಥಿಗಳು.<br>• ಕನಿಷ್ಠ 6 ವರ್ಷ ಕರ್ನಾಟಕದ ರಹವಾಸಿಯಾಗಿದ್ದು ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ಅಧ್ಯಯನ ಮಾಡಿದವರು.</td></tr>
</table>

| | | |
|---|---|---|
| | | 2. <u>**ಅನರ್ಹತೆಗಳು:-**</u><br>• ಸರ್ಕಾರಿ/ ಖಾಸಗಿ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವ ಅಭ್ಯರ್ಥಿಗಳು.<br>• ಸ್ವಯಂ ಉದ್ಯೋಗದಲ್ಲಿರುವ ಅಭ್ಯರ್ಥಿಗಳು.<br>• ವಿದ್ಯಾಭ್ಯಾಸವನ್ನು ಮುಂದುವರೆಸುತ್ತಿರುವ ಅಭ್ಯರ್ಥಿಗಳು. |

**ಸಂಖ್ಯೆ: ಕೌಉಜೀಇ 89 ಕೈತಪ್ರ 2025**

(ಡಾ. ಶರಣಪ್ರಕಾಶ ಆರ್ ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.